# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 755(974) |
| ಉತ್ತರಿಸಬೇಕಾದ ದಿನಾಂಕ | 27.12.2022 |
| ಉತ್ತರಿಸಬೇಕಾದವರು | ಮಾನ್ಯ ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆಯ ರಂಭಾಪುರ ಮತ್ತು ಕಸಬಾ ಗ್ರಾಮಗಳಲ್ಲಿ 50:50 ರ ಅನುಪಾತದಲ್ಲಿ ರೈತರ ಸಹಭಾಗಿತ್ವದಲ್ಲಿ ವಸತಿ ಯೋಜನೆ ರೂಪಿಸುವ ಪ್ರಸ್ತಾವನೆಯು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ |
| ಆ) | ಈ ಯೋಜನೆಯ ವಿಳಂಬಕ್ಕೆ ಕಾರಣಗಳೇನು; (ವಿವರ ನೀಡುವುದು) | ಸದರಿ ಯೋಜನೆಯು ಕಾಲಮಿತಿಯಲ್ಲಿ ಆಗದೇ ಇರುವುದರಿಂದ ಕೆಲವು ರೈತರು ಮಾನ್ಯ ನ್ಯಾಯಾಲಯದ ಆದೇಶ ಪಡೆದು ಬಿನ್ ಶೇತ್ಕಿ ಮಾಡಿಸಿಕೊಂಡಿರುತ್ತಾರೆ, ಅಲ್ಲದೇ, ರೈತರು ಸಹ ಜಮೀನು ಬಿಟ್ಟುಕೊಡಲು ಸಹಮತಿ ವ್ಯಕ್ತಪಡಿಸಿರುವುದಿಲ್ಲ. ಪ್ರಾಧಿಕಾರವು ಆರ್ಥಿಕವಾಗಿ ಸದೃಢವಾಗಿಲ್ಲವೆಂದು ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಸದರಿ ಯೋಜನೆಯನ್ನು ಕೈಬಿಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾಪಿಸಿರುತ್ತಾರೆ.<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿನ ಸಿವಿಲ್ ಅಪೀಲು ಸಂಖ್ಯೆ:3600/2011ಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಅಂಶವಾರು ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸರ್ಕಾರದಿಂದ ಪ್ರಾಧಿಕಾರಕ್ಕೆ ನಿರ್ದೇಶನ ನೀಡಲಾಗಿರುತ್ತದೆ<br><br>ಮುಂದುವರೆದು, ಪ್ರಾಧಿಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:3600/2011ರಲ್ಲಿ ಸಂಬಂಧಿಸಿದಂತೆ ನೀಡಿರುವ ಆದೇಶವು ರೈತರ ಸಹಭಾಗಿತ್ವದಲ್ಲಿ ಕೈಗೊಳ್ಳುವ ವಸತಿ ಯೋಜನೆಗೆ ಅನ್ವಯಿಸುದಿಲ್ಲವೆಂದು ಪ್ರಾಧಿಕಾರದ ವಕೀಲರು ಅಭಿಪ್ರಾಯಿಸಿರುವ ಮೇರೆಗೆ ಪ್ರಸ್ತಾಪಿತ ವಸತಿ |

| | | |
|---|---|---|
| | | ಯೋಜನೆಯನ್ನು ರದ್ದುಪಡಿಸಬೇಕೇ ಅಥವಾ ಮುಂದುವರಿಸಬೇಕೇ ಎಂಬುದರ ಬಗ್ಗೆ ಪ್ರಾಧಿಕಾರದಿಂದ ಸರ್ಕಾರದ ಸ್ಪಷ್ಟೀಕರಣ ಕೋರಲಾಗಿದೆ. |
| ಇ) | ಸರ್ಕಾರವು ಯಾವ ಕಾಲಮಿತಿಗೆ ಒಳಪಟ್ಟು ಈ ಯೋಜನೆಯನ್ನು ಪೂರ್ಣಗೊಳಿಸುವುದು (ಮಾಹಿತಿ ನೀಡುವುದು) | ಮೇಲ್ಕಂಡ ಯೋಜನೆಯನ್ನು ಮುಂದುವರೆಸಲು, ತೀರ್ಮಾನಿಸಿದ್ದಲ್ಲಿ ಸದರಿ ವಸತಿ ಯೋಜನೆಯನ್ನು ಪೂರ್ಣಗೊಳಿಸಲು ಕಾಲಮಿತಿಯನ್ನು ನಿಗಧಿಪಡಿಸಿ ಪ್ರಾಧಿಕಾರಕ್ಕೆ ನಿರ್ದೇಶನ ನೀಡಲಾಗುವುದು. |

ಕಡತ ಸಂಖ್ಯೆ: ನಅಇ 64 ಎಲ್‌ಸಿಕ್ಯೂ 2022 (ಇ)

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು